
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಸಿಂದಗಿ

ಸಂಪಾದಕ
ಡಾ. ವಾಸುದೇವ ಬಡಿಗೇರ



Arts, Commerce & Science C. MUDDEBIHAL -586212 Dt: Vijayapur. M.G.V.C.

೩

# ಆಡಳಿತ ವಿಭಾಗಗಳು

ಡಾ. ರಾಮು ಎಸ್. ಸಜ್ಜನ

ಪ್ರಾಚೀನ ಕರ್ನಾಟಕದ ಚರಿತ್ರೆಯ ವಿವಿಧ ಆಯಾಮಗಳಾದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಆಡಳಿತ ಬಿಡಿ ಭಾಗಗಳನ್ನು ಆಯ್ಕೆಮಾಡಿ ಆಯಾ ಪರಿಸರವನ್ನು ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ. ಇವುಗಳ ಅಧ್ಯಯನಕ್ಕೆ ಮೂಲ ಆಧಾರ ಸ್ತಂಭಗಳೆಂದರೆ ಪ್ರಾಚೀನ ಸಾಹಿತ್ಯಕೃತಿ ಹಾಗೂ ಶಾಸನಗಳು. ಪ್ರಸ್ತುತ ಸಿಂದಗಿಯು ವಿಜಯಪುರ ಜಿಲ್ಲೆಯ ಪ್ರಮುಖ ತಾಲೂಕ ಸ್ಥಳವಾಗಿದೆ. ಅದರಲ್ಲಿ ದೇವರ ಹಿಪ್ಪರಗಿ, ಕಲಕೇರಿ, ಆಲಮೇಲ, ಮತ್ತು ಮೊರಟಗಿ ಹೊಬಳಿಗಳಿವೆ. ೧೪೪ ಗ್ರಾಮಗಳು, ೪೦ ಗ್ರಾಮ ಪಂಚಾಯತ್‌ಗಳು, ೩೩ ತಾಲೂಕ ಪಂಚಾಯತ್‌ಗಳು, ೯ ಜಿಲ್ಲಾ ಪಂಚಾಯತ್‌ಗಳನ್ನು ಹೊಂದಿದೆ. ಸುಮಾರು ಮೂವತ್ತು ಸಾವಿರ ಜನಸಂಖ್ಯೆಯುಳ್ಳ ಸಿಂದಗಿ ಪಟ್ಟಣವು ವ್ಯಾಪಾರ ವಾಣಿಜ್ಯ ಮತ್ತು ಶೈಕ್ಷಣಿಕ ಕೇಂದ್ರವಾಗಿ ಬೆಳೆದು ಅಭಿವೃದ್ಧಿ ಹೊಂದುತ್ತಿದೆ. ಆದರೆ ಸಿಂದಗಿ ಪರಿಸರ ಪ್ರಾಚೀನ ಕಾಲಘಟ್ಟದಲ್ಲಿ ಅನೇಕ ಆಡಳಿತ ವಿಭಾಗಗಳಿಂದ ಕೂಡಿತ್ತು.

**ಐತಿಹಾಸಿಕ ಹಿನ್ನೆಲೆ**

ತರ್ದವಾಡಿ ಸಾಸಿರ ನಾಡಿನಲ್ಲಿ ಗುರುತಿಸಿಕೊಳ್ಳುವ ಸಿಂದಗಿ ತಾಲೂಕು ಪ್ರದೇಶವು ಬದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ಕಲಚುರಿ, ಯಾದವ (ಸೇವುಣರು) ಮತ್ತು ವಿಜಯಪುರ ಸುಲ್ತಾನರ ಆಡಳಿತದ ಪ್ರಭಾವಕ್ಕೆ ಒಳಗಾಗಿತ್ತು. ಅವರ ಅಧೀನ ಅರಸರಾದ ಸಾಮಂತರು, ಮಹಾಮಂಡಳೇಶ್ವರರು, ಮಂಡಳೇಶ್ವರರು, ಮಹಾಪ್ರಧಾನರು ಹಾಗೂ ಅಧಿಕಾರಿಗಳು ಆಡಳಿತವನ್ನು ಮಾಡಿರುವದು ಶಾಸನಗಳಿಂದ ತಿಳಿದುಬರುತ್ತದೆ. ಪ್ರಸ್ತುತ ಸಿಂದಗಿ ತಾಲೂಕಿನಲ್ಲಿ ೩೪ಕ್ಕಿಂತ ಹೆಚ್ಚು ಗ್ರಾಮಗಳಲ್ಲಿಯ ಸುಮಾರು ೯೭ ಶಾಸನಗಳು ಕಂಡುಬರುತ್ತವೆ. ಅವುಗಳಲ್ಲಿ ೯೨ ಪ್ರಕಟಿತ, ೫ ಅಪ್ರಕಟಿತ ಶಾಸನಗಳು. ಕಲ್ಯಾಣ ಚಾಲುಕ್ಯ ಅರಸರ ೩೭, ಕಳಚುರಿ ಅರಸರ ೧೦, ಯಾದವ ಅರಸರ ೧೫ ಮತ್ತು ಅರಸು ಮನೆತನದ ಹೆಸರನ್ನು

PRINCIPAL,
G.V.C. Arts, Com. & Science College
MUDDEBIHAL - 586212.

ಉಲ್ಲೇಖಿಸದ ೩೫ ಹೀಗೆ ಒಟ್ಟು ೯೭ ಶಾಸನಗಳು ಸಿಂದಗಿ ಪರಿಸರದ ವಿವಿಧ ಗ್ರಾಮಗಳಲ್ಲಿವೆ. ಇವುಗಳ ಅಧ್ಯಯನದ ಸಹಾಯದಿಂದ ಸಿಂದಗಿಯ ಆಡಳಿತ ವಿಭಾಗಗಳ ಪ್ರಮುಖ ಅಂಶಗಳನ್ನು ಬೆಳಕಿಗೆ ತರಲು ಪ್ರಯತ್ನಿಸಲಾಗಿದೆ.

ಈ ಎಲ್ಲ ಶಾಸನಗಳು ರಾಜಮನೆತನಗಳ ಸಾಧನೆಗಳು, ಸಾಮ್ರಾಜ್ಯ ವಿಸ್ತಾರ ರಾಜರು ಮಾಡಿದ ಯುದ್ಧದ ಘಟನಾವಳಿಗಳು, ದೇವಾಲಯಗಳಿಗೆ, ಮಠಗಳಿಗೆ, ಬ್ರಾಹ್ಮಣರಿಗೆ, ಪಂಡಿತರಿಗೆ ಹಾಗೂ ವಿದ್ವಾಂಸರಿಗೆ ನೀಡಿದ ಭೂಮಿ ದಾನ, ಎಣ್ಣೆಗಾನ ದಾನ, ತೋಟ ದಾನ, ಹಣ ದಾನ, ಸುವರ್ಣ ದಾನ, ಬಿರುದು ಬಾವುಲಿಗಳಲ್ಲದೆ ಕೆರೆ, ಬಾವಿ, ಅರವಟ್ಟಿಗೆ ಇತರೆ ಸಾಮಾಜಿಕ ಧಾರ್ಮಿಕ, ಶೈಕ್ಷಣಿಕ ಕಾರ್ಯಗಳ ಮಾಹಿತಿಯನ್ನು ವಿವರಿಸುತ್ತವೆ. ಇನ್ನು ಕೆಲವೊಂದು ಶಾಸನಗಳು ಆಡಳಿತದ ವಿಭಾಗ ಗಳನ್ನು ಉಲ್ಲೇಖಿಸುತ್ತವೆ. ಉದಾಹರಣೆಗೆ ಎಳೆಮೇಲ ಮೂವತ್ತು, ಕುಮ್ಮಸಿ ಮೂವತ್ತು, ಸಿಂದಗಿ ಹನ್ನೇರಡು ಇವು ಪ್ರಮುಖ ಆಡಳಿತ ಕೇಂದ್ರಗಳಾಗಿದ್ದವು. ಅಲ್ಲದೆ ಕೊಂಡು ಗೂಳಿ, ಸಂತೆ ಕೋರವಾರ, ಚಟ್ಟರಿಕೆ ಹಾಗೂ ಮಲಘಾಣ ಪ್ರಮುಖ ಅಗ್ರಹಾರ ಗಳಾಗಿದ್ದವು.

ಪ್ರಾಚೀನ ಕಾಲದಲ್ಲಿ ಸಿಂದಗಿ ಪರಿಸರವು ಮುಖ್ಯವಾಗಿ ಕಲ್ಯಾಣ ಚಾಲುಕ್ಯ, ಕಳಚುರಿ ಹಾಗೂ ಯಾದವ ಅರಸರ ಆಡಳಿತಕ್ಕೆ ಒಳಪಟ್ಟಿತ್ತು. ಚಾಲುಕ್ಯ ಅರಸರಾದ ಎರಡನೆಯ ಜಯಸಿಂಹ ಒಂದನೆಯ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ, ಮೂರನೆಯ ಸೋಮೆಶ್ವರ, ಎರಡನೆಯ ಜಗದೇಕಮಲ್ಲ ಮತ್ತು ನಾಲ್ಕನೆಯ ಸೋಮೆಶ್ವರ ಮುಂತಾದ ಅರಸರ ಆಡಳಿತಾವಧಿಯಲ್ಲಿ ಈ ಪ್ರದೇಶವು ಆಡಳಿತಾತ್ಮಕ ವಾಗಿ ಸಾಂಸ್ಕೃತಿಕವಾಗಿ ಅಭಿವೃದ್ಧಿಯನ್ನು ಸಾಧಿಸಿದ್ದು ಇಲ್ಲಿ ಲಭ್ಯವಿರುವ ದೇವಾಲಯ ಹಾಗೂ ಇತರೆ ಸ್ಮಾರಕಗಳಿಂದ ಗಮನಿಸಬಹುದಾಗಿದೆ. ಉದಾಹರಣೆಗಾಗಿ ಕಡ್ಲೇ ವಾಡದ ಸೋಮನಾಥ, ಚಟ್ಟರಕಿಯ ಮಲ್ಲಿಕಾರ್ಜುನ, ಚಾಂದಕವಟೆಯ ಈಶ್ವರ, ದೇವರನಾವದಗಿಯ ಮಲ್ಲಿಕಾರ್ಜುನ, ಕುಳೆಕುಮಟಗಿಯ ಚಂದೇಶ್ವರ (ಚಂದ್ರ ಶೇಖರ), ಸಿಂದಗಿಯ ಸಂಗಮೇಶ್ವರ ಮೂದಲಾದ ದೇವಾಲಯಗಳು ಇವರ ಕಾಲದ ವಾಸ್ತುಶಿಲ್ಪದ ಜೀವಂತ ಸಾಕ್ಷಿಗಳಾಗಿವೆ.

ಕಲ್ಯಾಣ ಚಾಲುಕ್ಯರ ಆಡಳಿತಾವಧಿಯಲ್ಲಿಯೇ ಅಧಿಕಾರಕ್ಕೆ ಬಂದ ಕಳಚುರಿ ಅರಸರಾದ ಸೋಮದೇವ ಮತ್ತು ಬಿಜ್ಜಳ ಅರಸರ ಕಾಲದಲ್ಲಿ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡುವುದರ ಜೊತೆಗೆ ಅನೇಕ ದಾನ-ದತ್ತಿಗಳನ್ನು ಬಿಟ್ಟಿದ್ದಾರೆ. ಯಾದವ ಅರಸರಾದ ಸಿಂಘಣ(ರಾಮಚಂದ್ರ) ಜೈತುಗಿ, ಭಿಲ್ಲಮ ಹಾಗೂ ಕನ್ನರದೇವ ಅರಸರು ಇದನ್ನು ಮುಂದುವರೆಸಿಕೊಂಡು ಬಂದರು. ಅಲ್ಲದೆ ಸಾಮಂತರು, ಮಹಾಮಂಡಳೇಶ್ವರರು, ಮಂಡಳೇಶ್ವರರು, ಮಹಾ ಪ್ರಧಾನರು ಹಾಗೂ ಅಧಿಕಾರಿಗಳು ಪರಂಪರಾಗತ ಆಡಳಿತದಲ್ಲಿದ್ದರು.



M.G.V.C. Arts, Commerce & Science College
MUDDEBIHAL -586212
Dt: Vijayapur.

### ಆಡಳಿತದ ವಿಭಾಗಗಳು

ಪ್ರಾಚೀನ ಅರಸರು ಆಡಳಿತದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ವಿಭಾಗ ಮತ್ತು ಉಪ ವಿಭಾಗಗಳಾಗಿ ವಿಂಗಡಿಸಿ ಆಳುತ್ತಿದ್ದರು. ತರ್ದವಾಡಿ ಸಾಸಿರ, ನೊಳಂಬವಾಡಿ ಮೂವತ್ತೆರಡುಸಾವಿರ, ಗಂಗವಾಡಿ ತೊಂಬತ್ತಾರುಸಾವಿರ, ಹಗರಟಗೆ ಮುನ್ನೂರು, ಕನಮಡಿ ಮೂನ್ನರು, ಬೇಳ್ವಲನಾಡು, ನಾಗರಖಂಡ ಎಪ್ಪತ್ತು, ಕರಡಿಕಲ್ಲು ಮುನ್ನೂರು ಮುಂತಾದವು ದೊಡ್ಡ ಆಡಳಿತ ವಿಭಾಗಗಳಾದರೆ, ನಾಡ ಕಂಪಣವೆಂದು ಸಣ್ಣ ವಿಭಾಗಗಳಿರುತ್ತಿದ್ದವು. ಆರುನೂರುಂಬಾಡ, ಅಂಕುಲಗೆ ಮೂವತ್ತು, ಕಾರಕುರುವ ನಾಲ್ವತ್ತು, ಖೇಡ ಮೂವತ್ತಾರುಂಬಾಡ, ಬೇವಿನೂರು ಮೂವತ್ತಾರು, ಮುತ್ತಗಿ ಮೂವತ್ತು ಹೀಗೆ ಹಲವು ವಿಭಾಗಗಳನ್ನು ಹೆಸರಿಸಬಹುದು. ಪ್ರಾಚೀನ ತರ್ದವಾಡಿ ನಾಡು ಸಾವಿರ ಹಳ್ಳಿಗಳ ಕೇಂದ್ರವಾಗಿರುವುದನ್ನು ಮುತ್ತಗಿ[೧] ಮತ್ತು ಸಾಲೋಟಗಿ[೨] ಶಾಸನಗಳು ಸ್ಪಷ್ಟಪಡಿಸುತ್ತವೆ. ಇಂದಿನ ವಿಜಯಪುರ ಜಿಲ್ಲಾ ಪರಿಸರದ ಬಹುತೇಕ ಪ್ರದೇಶಗಳು ಇದರಲ್ಲಿ ಸಮ್ಮೀಳಿತಗೊಂಡಿದ್ದವು. ಸಾವಿರ ಹಳ್ಳಿಗಳ ಆಡಳಿತ ವಿಭಾಗವಾಗಿ ರೂಪುಗೊಂಡ ಈ ನಾಡು ಪ್ರಸ್ತುತ ಇಂಡಿ ತಾಲೂಕಿನ 'ತದ್ದೇವಾಡಿ' ತರ್ದವಾಡಿ ಸಾಸಿರದ ಮುಖ್ಯ ಸ್ಥಳವಾಗಿತ್ತು. ಭೌಗೋಳಿಕವಾಗಿ ಪ್ರಾಚೀನ ತರ್ದವಾಡಿ ನಾಡು ದಕ್ಷಿಣೋತ್ತರದ ಕೃಷ್ಣಾ ಮತ್ತು ಭೀಮಾ ನದಿಗಳ ಮಧ್ಯದ ಇಂದಿನ ವಿಜಯಪುರ ಜಿಲ್ಲೆಯ ಇಂಡಿ, ಸಿಂದಗಿ, ಮುದ್ದೇಬಿಹಾಳ, ಬಸವನ ಬಾಗೇವಾಡಿ ಹಾಗೂ ವಿಜಯಪುರ ತಾಲೂಕುಗಳನ್ನಲ್ಲದೆ ನೆರೆಯ ಮಹಾರಾಷ್ಟ್ರದ ಜತ್ತ, ಮಂಗಳ ವೇಡ ಮತ್ತು ಕಲಬುರಗಿ ಜಿಲ್ಲೆಯ ಜೇವರಗಿ ತಾಲೂಕಿನ ಕೆಲ ಹಳ್ಳಿಗಳನ್ನೊಳ ಗೊಂಡಿತ್ತು.[೩] ಈ ಸಾವಿರ ಹಳ್ಳಿಗಳ ಆಡಳಿತ ವಿಭಾಗದಲ್ಲಿ ಸಿಂದಗಿ ಪರಿಸರವು ಪ್ರಮುಖ ಉಪ ಆಡಳಿತ ವಿಭಾಗವಾಗಿತ್ತು. ಶಾಸನಗಳ ಉಲ್ಲೇಖದಂತೆ ಸಿಂದಗಿಯನ್ನು 'ಹಂನೆರಡಟಿ ಮೊದಲಬಾಡಂ ಸಿನ್ದಿಗೆ', 'ಸಿಂದಿಗೆ ಹಂನೆರಡು', 'ಕಂಪಣ ಸಿನ್ದಿಗೆಯ ೧೨' ಎಂದು ಜೊತೆಗೆ ಸಿನ್ದಿಗೆ, ಸಿಂಧುಗಿ, ಸಿಂದಿಗೆ, ಸಿಂಧಿಕಾಪುರ ಎಂದು ಕರೆಯ ಲಾಗಿದೆ. ಸಿಂದಗಿ ಪರಿಸರದಲ್ಲಿ ಎಳಮೇಲೆ ಮೂವತ್ತು, ಕುಮ್ಮಸಿ ಮೂವತ್ತು, ಸಿಂದಗಿ ಹನ್ನೆರಡು ಚಿಕ್ಕ ಘಟಕಗಳಾಗಿದ್ದವು. ಇವುಗಳ ಜೊತೆಗೆ ಅಗ್ರಹಾರಗಳಾದ ಕೊಂಡುಗೂಳಿ, ಸಂತೆ ಕೋರಾವೂರ (ಕೋರವಾರ), ಚಟ್ಟರಕೆ ಮತ್ತು ಮಲಘಾಣ ಇವು ಆಡಳಿತದ ಸಣ್ಣ ಭಾಗಗಳಾಗಿದ್ದವು. ಇವುಗಳನ್ನು ಪ್ರಸ್ತುತ ಇಂದಿನ ಜಿಲ್ಲೆ, ತಾಲೂಕು, ಹೋಬಳಿಗಳಿಗೆ ಹೊಲಿಕೆ ಮಾಡಬಹುದು. ಏಕೆಂದರೆ ಸ್ಥಳೀಯ ಜನಸಾಮಾನ್ಯರ ಆಶೋತ್ತರಗಳನ್ನು ಹತ್ತಿರದಿಂದ ಇಡೇರಿಸುವ ಉದ್ದೇಶ ಈಗಿನ ಸರಕಾರದಿದ್ದರೆ, ಅರಸೊತ್ತಿಗೆ ಅಂದರೆ ಸಾಮ್ರಾಜ್ಯಗಳನ್ನು ನಿರ್ಮಿಸಿ ಅವುಗಳ ಮುಖಾಂತರ ಆಡಳಿತ ನಡೆಸುವುದು ಕಷ್ಟವೆಂದು ಅರಿತ ನಮ್ಮ ಪ್ರಾಚೀನ ಅರಸರು

ಆಡಳಿತ ಸುಗಮವಾಗಿ ಸಾಗಲು ಅನೇಕ ವಿಭಾಗಗಳಾಗಿ ವಿಂಗಡಿಸಿ ಪ್ರಜಾ ಕಲ್ಯಾಣದ ಕಾರ್ಯಗಳನ್ನು ಮಾಡುವ ಗುರಿ ಹೊಂದಿದ್ದರು. ಇದನ್ನು ಆಯಾ ಅರಸರ ಅಧಿಕಾರಾವಧಿಯಲ್ಲಿ ರಚಿತವಾದ ಸಾಹಿತ್ಯ ಮತ್ತು ಶಾಸನಗಳು ಪ್ರಚುರಪಡಿಸುತ್ತವೆ.

**ಎಳಮೇಲಿ ಮೂವತ್ತು:** ಈಗ ಆಲಮೇಲವೆಂದು ಕರೆಯಲ್ಪಡುವ ಎಳಮೇಲವು ಸಿಂದಗಿಯಿಂದ ಉತ್ತರಕ್ಕೆ ೨೦ ಕಿ.ಮೀ. ದೂರದಲ್ಲಿದೆ. ಇದು ಕಲ್ಯಾಣ ಚಾಲುಕ್ಯ, ಕಲಚುರಿ ಮತ್ತು ಯಾದವ ಅರಸರ ಕಾಲದಲ್ಲಿ ತರ್ದವಾಡಿ ಸಾಸಿರ ನಾಡಿನ ಉಪ ಆಡಳಿತ ವಿಭಾಗವಾಗಿ ಮೂವತ್ತು ಹಳ್ಳಿಗಳ ಮೇಲಿನ ಕೇಂದ್ರವಾಗಿತ್ತು.

ಚಾಲಕ್ಯ ಅರಸ ಎರಡನೆಯ ಜಗದೇಕಮಲ್ಲನ ಕಾಲದ ಕ್ರಿ.ಶ. ೧೧೪೦ರ ಶಾಸನ ಜಗದೇಕಮಲ್ಲದೇವ ಪಾದಾರಾಧಕ ಪರಬಳಸಾಧಕಂ ನಾಮಾದಿ ಸಮಸ್ತ ಪ್ರಸಸ್ತಿಸಹಿತಂ ಶ್ರೈಮನು ಮಹಾಮಣ್ಡಳೇಸ್ವರಂ ಸೋವಿದೇವರಸರೆಳೆಮೇಲುನಾಡು ಮೂ(ವ)ತ್ತ(ಱ) ಬಳಿಯ ನಾಬಿದಿಗೆಯ ಪ್ರಭುಗಳು ಮಹಿಮೆಯಂ ಎಂದು ಸೋವಿದೇವರಸನನ್ನು ಹೋಗುಳುವಾಗ 'ಎಳಮೇಲುನಾಡು ಮೂವತ್ತನ್ನು' ಉಲ್ಲೇಖಿಸುತ್ತದೆ.[೪]

ಕಲಚುರಿ ಸೋವಿದೇವನ ಕಾಲದ ಕ್ರಿ.ಶ ೧೧೬೮ರ ಕಡ್ಲೇವಾಡ ಶಾಸನವು ಸಿಲಾಹಾರ ವಂಶದ ಮಹಾಮಂಡಲೇಶ್ವರ ಸಿಂಗಿದೇವರಸನು ಎಳಮೇಲ ಆಳುತ್ತಿದ್ದಾಗ, ಮಹಾಮಂಡಳೇಶ್ವರ ಗೋಮದೇವರಸರುಂ ಹಡವಳಹಟ್ಟಿಯ ಕೇತೆಯನಾಕನು ಎಳಮೇಲು ಮೂವತ್ತಱ ಸಿಂದಿಗೆಯ ಹಂನೆರಡಱ ಪ್ರಭು ಗಾವುಂಡರು ಕಡಲೆವಾಡದ ಸೋಮನಾಥ ದೇವರ ಅಂಗರಂಗಭೋಗಕ್ಕೆಂದು ನಾಡಿನ ಪ್ರತಿ ಗ್ರಾಮದಿಂದ ಒಂದು ಗದ್ಯಾಣವನ್ನು ಧಾರಾಪೂರ್ವಕವಾಗಿ ದಾನ ಮಾಡಿದರು.[೫] ಕ್ರಿ.ಶ. ೧೧೭೨ರ ಕಡ್ಲೆವಾಡ ಶಾಸನವು ಕಲಚುರ್ಯ ಚಕ್ರವರ್ತಿ ರಾಯಮುರಾರಿ ಸೋವಿದೇವನು ಸೆಲೆಯಹಳ್ಳಿಯ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ, ಶ್ರೀಮನ್ಮಹಾಪ್ರಚಣ್ಡ ದಂಡನಾಯಕಂ ಕುಮಾರಂ ಬಮ್ಮಿದೇವರಸರ್ ತಂಮ್ಮಾಳ್ಕೆಯ ಸಗರ ಹಗರಿಟ್ಟಿಗೆ ಯೆಳಮೇಲನಾಡುಮಂ ನೋಡುತ್ತಂ ಬನ್ದು ಕಡ್ಲೇವಾಡದ ಸ್ವಯಂಭು ಸೋಮನಾಥ ದೇವಾಲಯಕ್ಕೆ ದಾನ ನೀಡಿದ್ದಾನೆ.[೬] ಈ ರೀತಿಯಾಗಿ ಶಾಸನಗಳ ಉಲ್ಲೇಖದಂತೆ ಉಪ ಆಡಳಿತ ವಿಭಾಗವಾದ ಎಳಮೇಲನ್ನು 'ಎಳಮೇಲುನಾಡು ಮೂವತ್ತು', 'ಎಳಮೇಲ ಮೂವತ್ತು', 'ಯೆಳಮೇಲ ನಾಡು' ಎಂದು ಕರೆಯಲಾಗಿದೆ. ಅಲ್ಲದೆ ಆಲಮೇಲ,[೭] ಕಡ್ಲೆವಾಡ,[೮] ಕಕ್ಕಳಮೇಲ್[೯] ಶಾಸನಗಳು 'ಏಳಮೇಲ', 'ಯೆಳಮೇಲ' ಎಂದು ಈ ಆಡಳಿತ ವಿಭಾಗವನ್ನು ಹೆಸರಿಸುತ್ತವೆ. ಎಳಮೇಲ ಮೂವತ್ತು ಆಡಳಿತ ವಿಭಾಗವು ಮೂವತ್ತು ಹಳ್ಳಿಗಳ ಮೇಲೆ ಆಡಳಿತ ಕೇಂದ್ರವಾಗಿತ್ತು ಎಂಬುದು ಈ ಮೇಲಿನ ಎಲ್ಲ ಶಾಸನಗಳಿಂದ ತಿಳಿದು ಬರುತ್ತದೆ. ಅಲ್ಲದೆ ಈ ವಿಭಾಗವು ಚಾಲುಕ್ಯ, ಕಲಚುರಿ ಮತ್ತು ಯಾದವರ ಕಾಲದಲ್ಲಿ ಪ್ರಾಮುಖ್ಯತೆ ಪಡೆದಿತ್ತು ಎಂದು ಹೇಳಬಹುದು.



M.G.V.C. Arts, Commerce & Science ... MUDDEBIHAL -586212 Dt: Vijayapur

**ಕುಮ್ಮಸಿ ಮೂವತ್ತು:** ಈ ತಾಲೂಕಿನ ಭೀಮಾನದಿ ದಂಡೆಯ ಮೇಲಿರುವ ಕುಮ್ಮಸಿ ಮೂವತ್ತರ ಉಲ್ಲೇಖ ಮಲಘಾಣ, ಕಡ್ಲೆವಾಡ ಮತ್ತು ಸಿಂದಗಿ ಶಾಸನಗಳಲ್ಲಿ ಬಂದಿದೆ. ಇದು ಪ್ರಾಚೀನ ಮೂವತ್ತು ಹಳ್ಳಿಗಳನ್ನೊಳಗೊಂಡ ಆಡಳಿತ ಕೇಂದ್ರವಾಗಿತ್ತು. ಮಲಘಾಣ ಕಡ್ಲೆವಾಡ ಸಂಬೇವಾಡ, ದೇವಣಗಾವ ಕಕ್ಕಳಮೇಲಿ, ಕುಳೇಕುಮಟಗಿ, ಮತ್ತು ಸಿರಸಗಿ ಮುಂತಾದ ಹಳ್ಳಿಗಳು ಕುಮ್ಮಸಿ ಮೂವತ್ತರ ಆಡಳಿತ ಕೇಂದ್ರದಲ್ಲಿ ಸೇರಿದ್ದವು. ಇನ್ನೂ ಕೆಲವು ಗ್ರಾಮಗಳನ್ನು ಇಂದಿನ ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನಲ್ಲಿ ಗುರುತಿಸಬಹುದು.

ಮಲಘಾಣ ಗ್ರಾಮದ ಕ್ರಿಶ ೧೧೦೦ರ ಶಾಸನವು ಚಾಳುಕ್ಯಾಭರಣಂ ಶ್ರೀಮತ್ರಿಭುವನ ಮಲ್ಲದೇವರು ಭೋಜನ ಮೇಲೆ ಪಶ್ಚಿಮದಿಶಾವರಕ್ಕೆತ್ತಿರದಲ್ಲಿ ಭೀಮರತಿಯ ತೀರದಪ್ಪಯಣದ ಕುಪ್ಪ ಬೀಡಿನಲ್ಲಿದ್ದಾಗ, ಶ್ರೀಮದಂತಃಪುರವರ್ಗ್ಗಡೆ ದಂಡನಾಯಕಂ ವಾಮದೇವಯ್ಯಂಗಟು ಶ್ರೀ ತರ್ದ್ದವಾಡಿ ಸಾಸಿರದ ಬಳಿಯ ಕಂಪಣಂ ಕುಮ್ಮಸಿ ಮೂವತ್ತಱೊಳಗಣ ಅಗ್ರಹಾರಂ ಮಲ್ಲಗಾಣದಲು ಆದಿತ್ಯದೇವ, ಕೇಶವದೇವ ಮತ್ತು ವಾಮೇಶ್ವರ ದೇವರನ್ನು ಪ್ರತಿಷ್ಠೆಮಾಡಿ ದಾನ ನೀಡಿದ ಉಲ್ಲೇಖವಿದೆ.[೧೦] ಅದೇರೀತಿ ಕಡ್ಲೆವಾಡದ ಕ್ರಿ.ಶ. ೧೧೫೮ರ ಶಾಸನ ಶ್ರೀಮತ್ತರ್ದ್ದವಾಡಿ ಸಾವಿರದ ಕು(ಂ)ಮ್ಮಸಿ ಮೂವತ್ತಱ ಬಳಿಯ ಬಾಡಂ ಎಂದು, ಕ್ರಿ.ಶ. ೧೧೨೯ರ ಭೂಲೋಕ ಮಲ್ಲನ ಶ್ರೀ ಮನುಮಹಾಮಣ್ಡಳೇಶ್ವರ ತಜ಼ಕಾಡ ಪೆರ್ಮಾಡಿ ದೇವರಸರು ತರ್ದ್ದವಾಡಿ ಸಾಸಿರಮಾಟುತ್ತಮಿರೆ ಶ್ರೀಮದ್ದಣ್ಡನಾಯಕಂ ವಯಿಜನಾಥಯ್ಯ ಪ್ರಮುಖ ಕರಣಂಗಟುಂ ಮಂನೆಯ ಸೋವರಸರುಂ ಸಿಂದಿಗೆ ಹಂನೆರಡುಂ ಕುಂಮಸೆ ಮೂವತ್ತು ಅಂಕುಲಗೆ ಅಯಿವತ್ತಱ ಮಂನೆಯ ಕಾಳಮರಸನುಂ ನಾಡಪ್ರಭು ಗಾವುಂಡ ಮುಖ್ಯವಾಗಿ ಸಿನ್ದಿಗೆಯ ಶ್ರೀ ಮೂಲಸ್ತಾನ ದೇವರಂಗಭೋಗಕ್ಕೆ ಗದ್ಯಾಣವನ್ನು ದಾನ ಬಿಟ್ಟ ಉಲ್ಲೇಖವಿದೆ.[೧೧] ಕ್ರಿ.ಶ. ೧೧೮೬ರ ಕಡ್ಲೇವಾಡ ಶಾಸನ ಚಾಲುಕ್ಯ ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ, ಅವನ ದಂಡನಾಯಕ ಮಹಾಪ್ರಧಾನಿ ಬೊಮ್ಮಿದೇವ ರಸನಿದ್ದ ಶ್ರೀಮನ್ಮಹಾಮಂಡಳೇಶ್ವರ ಆನೆಮರಸರು ಯೆಳಮೇಲು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಿದ್ದ ಸಂದರ್ಭದಲ್ಲಿ ತರ್ದವಾಡಿ ಸಾಸಿರದ ಕಂಪಣ ಕುಮ್ಮಸಿ ಮೂವತ್ತಱ ಬಳಿಯ ಬಾಡಂ ನಾವಿದಿಗೆಯ ಮೇಲಾಳ್ಕೆ ಮನ್ನೆಯದ ತೆರಿಗೆಯಿಂದ ಬಂದ ಆದಾಯವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.[೧೨]

ಈ ರೀತಿಯಾಗಿ 'ಕಂಪಣ ಕುಮ್ಮಸಿ ಮೂವತ್ತು', 'ಕುಂಮ್ಮಸಿ ಮೂವತ್ತು', 'ಕುಂಮಸೆ ಮೂವತ್ತು' ಎಂದು ಉಲ್ಲೇಖಿಸುತ್ತವೆ. ಹೀಗಾಗಿ ಪ್ರಾಚೀನ ಕುಮ್ಮಸಿ ತರ್ದವಾಡಿ ಸಾಸಿರನಾಡಿನ ಆಡಳಿತದ ಉಪವಿಭಾಗವಾಗಿ ಕಾರ್ಯನಿರ್ವಹಿಸುತ್ತಿತ್ತು.

**ಸಿಂದಗಿ ಹನ್ನೆರಡು:** ಈಗ ತಾಲೂಕು ಕೇಂದ್ರ ಸ್ಥಾನವಾದ ಸಿಂದಗಿ ಅಂದು ತರ್ದವಾಡಿ ಸಾಸಿರ ನಾಡಿನಲ್ಲಿ ಸಣ್ಣ ಕಂಪಣವಾಗಿತ್ತು. ಚಾಲುಕ್ಯ ವಿಕ್ರಮಾದಿತ್ಯನ ಕಾಲಾವಧಿಯ

ಕ್ರಿ.ಶ. ೧೧೨೦ರ ಶಾಸನ 'ಹಂನೆರಡಱ ಮೊದಲಬಾಡಂ ಸಿನ್ದಿಗೆ' ಎಂದು,[೧೪] ಕ್ರಿ.ಶ. ೧೧೨೯ರ ಭೂಲೋಕಮಲ್ಲನ ಮಹಾಮಂಡಳೇಶ್ವರ ತರೆಕಾಡ ಪೆರ್ಮಾಡಿದೇವನು ತರ್ದವಾಡಿ ಸಾವಿರವನ್ನು ಆಳುತ್ತಿರುವಾಗ, ಸಿನ್ದಿಗೆಯ ಮೂಲಸ್ಥಾನದೇವರ ಪೂಜಾರ್ತವಾಗಿ ಸಿಂದಿಗೆ ಹಂನೆರಡುಂ ಕುಂಮಸೆ ಮೂವತ್ತು ಅಂಕುಲಗೆ ಆಯಿವತ್ತಱ ಮನ್ನೆಯದ ಕಾಳಮರಸ ಮುಂತಾದವರು ಸೇರಿ ಊರಿನಲ್ಲಿ ಒಂದು ಗದ್ಯಾಣವನ್ನು ಬಿಟ್ಟ ಸಂದರ್ಭದಲ್ಲಿ ಉಪ ಆಡಳಿತ ವಿಭಾಗವಾದ ಸಿನ್ದಿಗೆಯನ್ನು ಉಲ್ಲೇಖಿಸಿದೆ.[೧೫] ಅದೇ ರೀತಿ ಕ್ರಿ.ಶ. ೧೧೬೮ರ ರಾಯಮುರಾರಿ ಸೋವಿದೇವನ ಆಡಳಿತ ಅವಧಿಯಲ್ಲಿ ಎಳಮೇಲು ಮೂವತ್ತು, ಸಿಂದಿಗೆ ಹಂನೆರಡಱ ಪ್ರಭು ಗಾವುಂಡುಗಳು ಕಡಲೆವಾಡದ ಸ್ವಯಂಭು ಸೋಮನಾಥ ದೇವರಿಗೆ ದಾನ ಬಿಟ್ಟ ಸಂದರ್ಭದಲ್ಲಿ ಹೆಸರಿಸುತ್ತದೆ.[೧೬] ಕ್ರಿ.ಶ. ೧೦೪೦ರ ಚಾಲುಕ್ಯ ಜಗದೇಕಮಲ್ಲನ ಆಳ್ವಿಕೆಯ ಶಾಸನದಲ್ಲಿ ಕಂಪಣ ಸಿನ್ದಿಗೆಯ ೧೨ರ ಬಳಿಯ ಬೆನಕನವಿಟ್ಟಿಗೆಯ ಮೂಲಸ್ಥಾನದ ಮಹಾದೇವರ್ಗ್ಗೆ ದಾನವನ್ನು ನೀಡುವ ಸಂದರ್ಭದಲ್ಲಿ ಈ ಆಡಳಿತ ವಿಭಾಗವನ್ನು ಉಲ್ಲೇಖಿಸುತ್ತದೆ.[೧೭] ಈ ರೀತಿಯಾಗಿ ಶಾಸನಗಳು 'ಹಂನೆರಡಱ ಮೊದಲಬಾಡಂ ಸಿನ್ದಿಗೆ', 'ಸಿಂದಿಗೆ ಹಂನೆರಡು', 'ಕಂಪಣ ಸಿನ್ದಿಗೆಯ ೧೨' ಎಂದು ಈ ಆಡಳಿತ ವಿಭಾಗವನ್ನು ಹೆಸರಿಸು ತ್ತವೆ. ಅಲ್ಲದೆ ಕೆಲವು ಶಾಸನಗಳು ಸಿನ್ದಿಗೆ, ಸಿಂಧುಗಿ, ಸಿಂದಿಗೆ, ಸಿಂಧಿಕಾಪುರ ಎಂದು ಈ ಆಡಳಿತ ವಿಭಾಗವನ್ನು ಉಲ್ಲೇಖಿಸುತ್ತವೆ. ಕಲ್ಯಾಣ ಚಾಲುಕ್ಯ, ಕಲಚುರಿ ಮತ್ತು ಯಾದವ ಅರಸರ ಆಡಳಿತದ ಸಮಯದಲ್ಲಿ ಸಿಂದಗಿ ಸಣ್ಣ ಆಡಳಿತ ವಿಭಾಗವಾಗಿ (ಕಂಪಣ) ಕಾರ್ಯ ನಿರ್ವಹಿಸಿದ್ದನ್ನು ಗುರುತಿಸಬಹುದು. ಸಿಂದಗಿ ಯರಗಲ್, ಬೆನಕೊಟಗಿ, ರಾಂಪೂರ, ಆಹೇರಿ, ಬಂದಾಳ ಮತ್ತು ಗಣಿಹಾರ ಮುಂತಾದ ಗ್ರಾಮಗಳು ಸಿಂದಗಿ ಹನ್ನೆರಡರ ಆಡಳಿತದಲ್ಲಿ ಸೇರಿಕೊಂಡಿರಬೇಕು.

**ಅಗ್ರಹಾರಗಳು:** ಪ್ರಾಚೀನ ಸಿಂದಗಿ ಪರಿಸರದಲ್ಲಿ ಅಗ್ರಹಾರಗಳು ಆಡಳಿತದ ಉಪಭಾಗಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಚಾಲುಕ್ಯ ತ್ರಿಭುವನಮಲ್ಲನ ಕ್ರಿ.ಶ. ೧೧೦೭ರ[೧೮] ಮತ್ತು ಕಲಚುರಿ ಬಿಜ್ಜಳನ ಕ್ರಿ.ಶ. ೧೧೬೬ರ[೧೯] ಶಾಸನಗಳು ಕೊಂಡಗೂಳಿಯನ್ನು 'ಸರ್ವ್ವನಮಸ್ಯ ಶ್ರೀಮದಗ್ರಹಾರಂ ಕೊಂಡಗುಳಿ' ಎಂದು ಹೆಸರಿಸುತ್ತವೆ.

ಕ್ರಿ.ಶ. ೧೧೩೨ರ ಕೊಂಡಗೂಳಿ ಶಾಸನವು ಕಲ್ಯಾಣ ಚಾಲುಕ್ಯ ಅರಸ ಮೂರನೆಯ ಸೋಮೇಶ್ವರನ ಆಡಳಿತಾವಧಿಯಲ್ಲಿ ರಚಿತವಾಗಿದ್ದು, ಕೇಳಿಮಯ್ಯ ದಂಡನಾಯಕ ಹಾಗೂ ಗಣಪತಿ ದಂಡನಾಯಕರಿಂದ ಹಿರಿಯ ಗ್ರಂಥ, ಕಿರಿಯ ಗ್ರಂಥ ಕಲಿಸುವ ಉಪಾಧ್ಯಾಯರಿಗೆ ಮತ್ತು ರೂಪವತಾರ ವ್ಯಾಕರಣ ಕಲಿಸುವ ಉಪಾಧ್ಯಾಯರಿಗೆ ಹಣದಾನ ನೀಡಿದ ವಿವರಣೆ ಇದೆ. ಅಗ್ರಹಾರಗಳಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರು ವೇದಾಂಗ ಪರಿಣಿತಿ ಹೊಂದಿದ್ದರು. ಅವರಿಗೆ ಹಣ ದಾನವಾಗಿ ನೀಡಲಾಗಿದೆ.[೨೦]



M.G.V.C. Arts, Commerce & Science College MUDDEBIHAL -586212 Dt: Vijayapur

ಕ್ರಿ.ಶ. ೧೨೧೧ರ ಯಾದವ ಸಿಂಘಣ ಅರಸನ ಆಡಳಿತಾವಧಿಯಲ್ಲಿ ರಚಿತವಾದ ಕೊರವಾರ ಶಾಸನವು ಸರ್ಬ್ಬನಮಶ್ಯದುತ್ತಮದಗ್ರಹಾರಂ ಸಂತೆಯ ಕೋ(ರಾ)ವೂರ ವೆಂದು ಉಲ್ಲೇಖಮಾಡುತ್ತದೆ.[೨೧] ಶಾಸನವು ಹೆಚ್ಚು ತೃಟಿತವಾಗಿದ್ದು, ಅಗ್ರಹಾರ ಸಂತೆಯ ಕೋರವಾರದ ಮಹಾಜನರಿಗೆ ಭೂಮಿ ದಾನ ಎಂದು ವಿವರ ಮಾತ್ರ ಉಳಿದುಕೊಂಡಿದೆ. ಹೀಗಾಗಿ ಕೋರವಾರವು ಯಾದವರ ಆಡಳಿತದ ಅವಧಿಯಲ್ಲಿ ಅಗ್ರಹಾರವಾಗಿ ಪ್ರಾಮುಖ್ಯತೆಯನ್ನು ಪಡೆದಿತ್ತೆಂದು ಹೇಳಬಹುದು.

ಚಟ್ಟರಿಕೆಯ ಕ್ರಿ.ಶ ೧೧ನೆಯ ಶತಮಾನದ ಶಾಸನವು ಕಲ್ಯಾಣ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ ಮಹಾಮಂಡಳೇಶ್ವರ ಗೋವಣ ದೇವರಸನು 'ಶ್ರಿಮತ್ಸರ್ವ್ವನಮಶ್ಯದಗ್ರಹಾರಂ ಚೆಟ್ಟುರಗೆಯಂ'[೨೨] ಚಟ್ಟುರಕೆಯನ್ನು ಮುತ್ತಿದಾಗ, ದಾಯಾದಿಗಳ ಮರಣವೆಂದು ಉಲ್ಲೇಖಿಸುತ್ತದೆ. ಇದರಿಂದ ಚಟ್ಟರಕೆಯಲ್ಲಿ ಅಣ್ಣ ತಮ್ಮಂದಿರಲ್ಲಿ ಅಂತಹ ಕಲಹಗಳು ಸಂಭವಿಸಿರಬಹುದು.

ಮಲಘಾಣ ಗ್ರಾಮದ ಕ್ರಿ.ಶ. ೧೧೦೦ರ ಚಾಲುಕ್ಯ ತ್ರಿಭುವನಮಲ್ಲದೇವನ ಶಾಸನವು ಶ್ರೀಯ ತರ್ದ್ದವಾಡಿ ಸಾಸಿರದ ಬಳಿಯ ಕಂಪಣಂ ಕುಮ್ಮಸಿ ಮೂವತ್ತಱೊಳಗಣ ಸರ್ವ್ವನಮಸ್ಯಗ್ರಹಾರಂ ಮಲ್ಲಗಾಣವೆಂದು ಮಲಘಾಣ ಅಗ್ರಹಾರವನ್ನು ಕುರಿತು ಹೇಳುತ್ತದೆ.[೨೩] ಕ್ರಿ.ಶ. ೧೧೪೮ರ ಇದೇ ಗ್ರಾಮದ ಇನ್ನೊಂದು ಶಾಸನವು ಶ್ರೀಮತರ್ದ್ದ ವಾಡಿಸಾಸಿರದ ಬಳಿಯ ಕಂಪಣ ಕುಂಮಸಿ ಮೂವತ್ತಱೊಳಗಣ ಶ್ರೀಮತ್ಸರ್ವ ನಮಸ್ಯದಗ್ರಹಾರಂ ಮಲ್ಲಗಾಣವೆಂದು ತಿಳಿಸುತ್ತದೆ.[೨೪] ಕ್ರಿ.ಶ. ೧೧೩೩ರ ಮತ್ತೊಂದು ಶಾಸನದಲ್ಲಿ ಅಗ್ರಹಾರ ಮಲಘಾಣವೆಂದಿದೆ.[೨೫] ಮಹಾಮಂಡಳೇಶ್ವರ ಕುಮಾರ ಸೋವರಸನ ತಮ್ಮ ಸಿಂಗರಸನಿಗೆ ಪುಣ್ಯ ಪ್ರಾಪ್ತಿಯಾಗಲೆಂದು ಅಗ್ರಹಾರ ಮಲ ಘಾಣದ ಸ್ವಯಂಭು ದೇವಾಲಯಕ್ಕೆ ನೀಡಿದ ಸುವರ್ಣದಾನವೆಂದು ವಿವರಿಸುತ್ತದೆ. ಹೀಗಾಗಿ ಕಲ್ಯಾಣ ಚಾಲುಕ್ಯ ಅರಸರ ಆಡಳಿತದ ಅವಧಿಯಲ್ಲಿ ಮಲಘಾಣವು ಅಗ್ರಹಾರವಾಗಿ ಪ್ರಸಿದ್ಧಿಯನ್ನು ಪಡೆದಿತ್ತು.

ಈ ಪರಿಸರದ ಇಂದಿನ ಕಲಕೇರಿ ಗ್ರಾಮವು ಪ್ರಮುಖ ಅಗ್ರಹಾರವಾಗಿದ್ದನ್ನು ಶಾಸನಗಳು ತಿಳಿಸುತ್ತವೆ. ಕ್ರಿ.ಶ. ೧೧೧೭ ರ ಚಾಲುಕ್ಯ ತ್ರಿಭುವನಮಲ್ಲನ ಕಾಲಾವಧಿಯ ಶಾಸನವು ಶ್ರೀಮನ್ಮಹಾಪ್ರಧಾನಂ ಕಡಿತವೆರ್ಗಡೆ ಕನ್ನಡ ಸಂಧಿವಿಗ್ರಹಿ ದಣ್ಡನಾ(ಯ)ಕ ಕಾಳಿಮರಸರು ಬಿಟ್ಟ ಸರ್ವನಮಸ್ಯದಗ್ರಹಾರ ಕಲ್ಕೆಱೆಯ ಅಶೇಸ ಮಹಾಜನಗಳ ಅನುಮತಿಯನ್ನು ಪಡೆದು ಶ್ರೀ ಕೇಶವದೇವರಿಗೆ ದಾನ ಬಿಟ್ಟ ವಿಷಯವನ್ನು ಹೇಳುವ ಸಂದರ್ಭದಲ್ಲಿ ಅಗ್ರಹಾರ ಕಲ್ಕೆರೆಯನ್ನು ಉಲ್ಲೇಖಿಸುತ್ತದೆ.[೨೬] ಕ್ರಿ.ಶ. ೧೧ನೆಯ ಶತಮಾನದ ತೃಟಿತ ಶಾಸನ ಕಲಕೇರಿಯ ಶ್ರೀಮತ್ಸಮನಯದಗ್ರಹಾರಂ ಕಲಕೆರೆ, ಕ್ರಿ.ಶ. ೧೧೮೬ರ ಶಾಸನ ಸರ್ವ್ವನಮಸ್ಯದಗ್ರಹಾರಂ ಕಲ್ಕೇಱೆ ಎಂದು,[೨೭] ಕ್ರಿ.ಶ.

೧೨೪೪ರ ಯಾದವ ಭಿಲ್ಲಮರಸನ ಶಾಸನವು 'ಜಂಬೂದ್ವಿಪಕ್ಕಿಟ್ಟಳ ಹಗರಟಗೆ ನಾಡು ನೊಸಲಾ ನೊಸಲಿಂಗಟ್ಟಿಸೆವ ತಿಲಿಕದಂತಿರೆ ಪಟ್ಟಣವಿದು ರಾಯಮಟಿಗೆ ಕಲುಕೆಜ್ಯೆಯಸೆಗುಂ ॥ ಅದಲ್ಲದೆವುಂ ॥ ದ(ಮ)ದಿರವಿದು ದಾನದ ತವರ್ಮ್ಮನೆ ಧರ್ಮ್ಮದ ಜನ್ಮಭೂಮಿ ನೀತಿಯ ನಿಜದಾಗರ ಮಹಿಯಾಗರ(ಕುತ್ತಮ).. (ಭಬ್ಯ)ಕೋಟಿಯ ಮನಮೆಚ್ಚು ಮಚ್ಚುವೊಲನ್ನೆಂಬನ್ನೆ ಗಂ ಸೊಗಯಿಪ್ಪುದೀ ಧರಿತ್ರಿಯೊಟಿತಿ ಶೋಭೆಯಿಂ ಸೊಬಗನಾನ್ತು ಕಲುಕೆಜ್ ಎಂಬ ಪಟ್ಟಣಂ' ಎಂದು ಶಾಸನವು ಕಲಕೇರಿಯನ್ನು ವಿಶೇಷವಾಗಿ ವರ್ಣಿಸಿದೆ.

ಮೇಲಿನ ಅಂಶಗಳನ್ನು ಗಮನಿಸಿದಾಗ, ಪ್ರಾಚೀನ ಕರ್ನಾಟಕದಲ್ಲಿ ಆಡಳಿತ ವಿಭಾಗಗಳ ಪಾತ್ರ ನಿರ್ವಹಣೆ ಪ್ರಮುಖವಾಗಿತ್ತು. ಇದು ತರ್ದವಾಡಿ ಸಾಸಿರ ನಾಡಿನ ರಾಜರು ತಮ್ಮ ಸಾಮ್ರಾಜ್ಯ ವಿಸ್ತರಣೆಯ ಜೊತೆಗೆ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಸ್ಥಿತಿ ಸುಧಾರಿಸಬೇಕಾದರೆ ಆರ್ಥಿಕ ಸ್ಥಿತಿ ಉತ್ತಮವಾಗಿರಬೇಕು. ಅದಕ್ಕಾಗಿ ಅವರು ಪ್ರತಿಯೊಂದು ಆಡಳಿತ ವಿಭಾಗದಿಂದ ತೆರಿಗೆ(ಕಂದಾಯ) ಸಂಗ್ರಹಮಾಡುತ್ತಿದ್ದರು. ಸಾಮಂತರು. ಮಹಾಮಂಡಳೇಶ್ವರರು, ಮಂಡಳೇಶ್ವರರು ಮಹಾಪ್ರಧಾನರು, ಮತ್ತು ಅಧಿಕಾರಿಗಳು ತೆರಿಗೆಯನ್ನು ಸಂಗ್ರಹಿಸಿ ರಾಜ್ಯದ ಬೊಕ್ಕಸಕ್ಕೆ ಸಲ್ಲಿಸುತ್ತಿದ್ದರು. ಇದನ್ನು ಆಯಾ ವಿಭಾಗಗಳಲ್ಲಿ ನೇಮಕಗೊಂಡ ಅಧಿಕಾರಿಗಳು ನಿರ್ವಹಿಸುತ್ತಿದ್ದರು. ಏಳಮೇಲ ಮೂವತ್ತು, ಕುಮ್ಮಸಿ ಮೂವತ್ತು ಮತ್ತು ಸಿಂದಗಿ ಹನ್ನೆರಡು ಆಡಳಿತದ ಪ್ರಮುಖ ಭಾಗಗಳಾಗಿ ಈ ಪರಿಸರದಲ್ಲಿ ಕಾಣಿಸಿಕೊಳ್ಳುತ್ತವೆ.

**ಅಡಿಟಿಪ್ಪಣಿಗಳು**

೧. ಕ.ವಿ.ಶಾ.ಸಂ.೧೦, ಬಸವನ ಬಾಗೇವಾಡಿ, ನಂ.೩೮
೨. ಅದೇ, ಬಿಜಾಪುರ, ನಂ. ೧೩
೩. ಕೊಪ್ಪಾ ಎಸ್.ಕೆ., ೧೯೯೦, ತರ್ದವಾಡಿ ನಾಡು, ಪು.೧೫
೪. ಕ.ವಿ.ಶಾ.ಸಂ.೧೦, ಸಿಂದಗಿ, ನಂ.೫೧
೫. ಅದೇ, ಸಿಂದಗಿ, ನಂ.೪೧
೬. ಅದೇ, ಸಿಂದಗಿ, ನಂ.೪೯
೭. ಅದೇ, ಸಿಂದಗಿ, ನಂ.೨೬
೮. ಅದೇ, ಸಿಂದಗಿ, ನಂ.೩೮, ೪೨, ೪೫, ೪೬
೯. ಅದೇ, ಸಿಂದಗಿ, ನಂ.೫೬
೧೦. ಅದೇ, ಸಿಂದಗಿ, ನಂ.೬೧
೧೧. ಅದೇ, ಸಿಂದಗಿ, ನಂ.೩೭
೧೨. ಅದೇ, ಬಿಜಾಪುರ, ನಂ.೩೨
೧೩. ಅದೇ, ಸಿಂದಗಿ, ನಂ.೪೮
೧೪. ಅದೇ, ಬಿಜಾಪುರ, ನಂ.೩೧
೧೫. ಅದೇ, ಬಿಜಾಪುರ, ನಂ.೩೨
೧೬. ಅದೇ, ಬಿಜಾಪುರ, ನಂ.೪೧
೧೭. ಅದೇ, ಬಿಜಾಪುರ, ನಂ.೨೯
೧೮. ಅದೇ, ಸಿಂದಗಿ, ನಂ.೧೦೧
೧೯. ಅದೇ, ಸಿಂದಗಿ, ನಂ.೯೮
೨೦. ಅದೇ, ಸಿಂದಗಿ, ನಂ.೧೦೨
೨೧. ಅದೇ, ಸಿಂದಗಿ, ನಂ.೮೩
೨೨. ಅದೇ, ಸಿಂದಗಿ, ನಂ.೨೦
೨೩. ಅದೇ, ಸಿಂದಗಿ, ನಂ.೬೦
೨೪. ಅದೇ, ಸಿಂದಗಿ, ನಂ.೬೧
೨೫. ಅದೇ, ಸಿಂದಗಿ, ನಂ.೬೪
೨೬. ಅದೇ, ಸಿಂದಗಿ, ನಂ.೯೩
೨೭. ಅದೇ, ಸಿಂದಗಿ, ನಂ.೮೯
೨೮. ಅದೇ, ಸಿಂದಗಿ, ನಂ.೮೫



M.G.V.C. Arts, Commerce & Science College
MUDDEBIHAL-586212
Dt: Vijayapur.

**ಆಕರ ಗ್ರಂಥಗಳು**

೧. ಕಲಬುರ್ಗಿ ಎಂ.ಎಂ., ವಿಜಯಪುರ ಜಿಲ್ಲೆಯ ಶಾಸನ ಸೂಚಿ, ಕ.ವಿ.ವಿ., ಧಾರವಾಡ.
೨. ನಾಗಯ್ಯ ಚೆ.ಎಂ., ಆರನೇ ವಿಕ್ರಮಾದಿತ್ಯನ ಶಾಸನಗಳು, ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ.
೩. ಕೊಪ್ಪಾ ಎಸ್.ಕೆ., ತರ್ದವಾಡಿ ನಾಡು, ಪ್ರತಿಭಾ ಪ್ರಕಾಶನ, ಇಂಡಿ.
೪. ಭೋಜರಾಜ ಪಾಟೀಲ, ನಾಗರಖಂಡ ಎಪ್ಪತ್ತ, ಹಂಸಬಾವಿ, ಹಿರೇಕೇರೂರು ತಾಲೂಕು.
೫. ಗೋಪಾಲರಾವ್ ಎಚ್.ಎಸ್., ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣದ ಚಾಲುಕ್ಯರ ದೇವಾಲಯಗಳು, ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ, ಮೈಸೂರು.

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಹಯೋಗ

ಸಿ.ಎಮ್. ಮನಗೂಳಿ ಕಲಾ ಹಾಗೂ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ, ವಿಜಯಪುರ ಜಿಲ್ಲೆ

# ಪ್ರಮಾಣ ಪತ್ರ

## ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ–ಸಿಂದಗಿ

ರಾಜ್ಯಮಟ್ಟದ ವಿಚಾರಸಂಕಿರಣ

ಶ್ರೀ/ಶ್ರೀಮತಿ/ಡಾ. ............ ರಾಮಪ್ಪ ಎಚ್. ಸಜ್ಜನ ............ ಅವರು

ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗವು ಸಿ.ಎಮ್. ಮನಗೂಳಿ ಕಲಾ ಹಾಗೂ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ ಅವರ ಸಹಯೋಗದಲ್ಲಿ ಏರ್ಪಡಿಸಿದ ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ–ಸಿಂದಗಿ (ವಿಜಯಪುರ ಜಿಲ್ಲೆ)ಯಲ್ಲಿ ಫೆಬ್ರವರಿ 29 ರಿಂದ ಮಾರ್ಚ್ 01, 2016 ರ ವರೆಗೆ ನಡೆದ ರಾಜ್ಯಮಟ್ಟದ ವಿಚಾರಸಂಕಿರಣದಲ್ಲಿ ............ "ಆಡಳಿತ ವಿಭಾಗ" ............ ವಿಷಯ ಕುರಿತು ಪ್ರಬಂಧ ಮಂಡಿಸಿರುತ್ತಾರೆ / ಭಾಗವಹಿಸಿರುತ್ತಾರೆ

ಪ್ರಮಾಣೀಕರಿಸಲಾಗಿದೆ

PRINCIPAL,
M. G. V. C. Arts, Com. & Science College
MUDDEBIHAL - 586212

| ಡಾ. ವಾಸುದೇವ ಬಡಿಗೇರ | ಡಾ. ಸಿ.ಎಸ್. ವಾಸುದೇವನ್ | ಡಾ. ಮಲ್ಲಿಕಾ ಎಸ್. ಘಂಟಿ |
|---|---|---|
| ಸಂಚಾಲಕರು | ಮುಖ್ಯಸ್ಥರು | ಮಾನ್ಯ ಕುಲಪತಿಗಳು |

M.G.V.C. Arts, Commerce & Science College MUDDEBIHAL -586212 Dt: Vijayapur.